'ಆರುಗಂಟೆಗಂತೂ ಹೊರಡಲಿಕ್ಕಾಗಲಿಲ್ಲ ಈಗ ಹೊರಟಿದೀಯ ಅನ್ನು. ಇದನ್ನು ಮೊದಲೇ ಹೇಳಬಾರದಾಗತ್ತೆ?'

'ನಿಮಗೊಂದೂ ಅರ್ಥವಾಗಲ್ಲ. ಹೊರಡೋದು ನಿರ್ಧಾರವಾಗಿದ್ದರೆ ನಿಮಗ್ಯಾಕೆ ಇಷ್ಟೆಲ್ಲ ತೊಂದರೆ ಕೊಡತಿದ್ದೆ?'

'ಹೊರಡೋಕೆ ಇಷ್ಟ ಇಲ್ಲದಿದ್ದರೆ, ಬಿಡು, ಅದಕ್ಯಾಕೆ ಯೋಚನೆ?'

'ಯಾವುದನ್ನ ಯೋಚನೆ ಮಾಡಬೇಕೋ ಅದನ್ನು ಬಿಟ್ಟು ಉಳಿದದ್ದೆಲ್ಲ, ಸುಮ್ಮನೆ ಯಾಕೆ ಮೈ ಮೇಲೆ ಹಾಕ್ಕೋಬೇಕು?'

ಮಧು ಅಲ್ಲಿಗೇ ನಿಲ್ಲಿಸಲಿಲ್ಲ. 'ನಡೀರ್ರಿ, ಮೊದಲು ಊಟ ಮಾಡಿರಿ. ಅದಿಲ್ಲದೆ ನಿಮ್ಮ ಮಾತು ಎಲ್ಲೆಲ್ಲಿಗೋ ಹೋಗುತ್ತೆ' ಎಂದು ಮುಂದುವರಿಸಿದಳು.

'ಹಾಗಾದರೆ ನಡಿ. ಅದೂ ಒಂದು ಪೂರೈಸಲಿ.'

'ನಾನಿಲ್ಲಿಗೆ ಬಂದದ್ದು ಊಟಕ್ಕಲ್ಲ. ನಾನೀಗ ಊಟ ಮಾಡೋ ಸ್ಥಿತಿಯಲ್ಲೂ ಇಲ್ಲ. ನೀವು ಮಾಡಿರಿ ನಡೀರಿ.'

'ನನಗೆ ಊಟ ಅಷ್ಟು ಮುಖ್ಯ ಅಂತಲೆ?'

'ನನಗೋಸ್ಕರ ನೀವು ಉಪವಾಸ ಮಾಡಬೇಕಾದ್ದಿಲ್ಲ.'

'ನನ್ನಿಂದ ನೀನು ಯಾವತ್ತು ಉಪಕಾರ ಪಡೆದುಕೊಂಡಿದ್ದೆ? ನನ್ನಿಂದ ನಿನಗೆ ಆಗಬೇಕಾಗಿರೋದಾದರೂ ಏನು? ಮದುವೆ ಮಾಡಿಕೊಳ್ಳಲಿಕ್ಕೆ ಹೋಗೋಳಿಗೆ ನಾನು ಯಾಕೆ ಬೇಕು?'

ನಾನು ಕುಳಿತ ಜಾಗದಿಂದ ಎದ್ದು ಹೊರಡುತ್ತೇನೆ. ಮಧು ನನ್ನ ಕೈಹಿಡಿದು ಜಗ್ಗುತ್ತಾಳೆ. ನನಗೆ ಅವಳ ಕರೆಯನ್ನು ತಿರಸ್ಕರಿಸಲು ಸಾಧ್ಯವಾಗುವುದಿಲ್ಲ. ನಾನು ಹಿಂದಿರುಗಿ ಅವಳ ಮುಖ ನೋಡುತ್ತೇನೆ. ಕಣ್ಣು ತುಂಬಿಕೊಂಡಿದೆ. ಆದರೂ ಅವಳು ತನ್ನ ದುಃಖವನ್ನು ಹತ್ತಿಕ್ಕಿಕೊಂಡಿರುವುದು ಸ್ಪಷ್ಟವಾಗಿದೆ.

'ನಿಮಗೆಷ್ಟು ಸಾರಿ ಈ ವಿಷಯ ಹೇಳಿಲ್ಲ, ಆನಂದ್? ನಾನು ರೇಖಾಳ ವಿಷಯ ನಿಮ್ಮ ಹತ್ತಿರ ಎಷ್ಟು ಸಾರಿ ಪ್ರಸ್ತಾಪ ಮಾಡಿಲ್ಲ? ನೀವೂ ನನ್ನನ್ನ ನಂಬಲ್ಲ ಎಂದರೆ?'

ನನಗೆ ಒಮ್ಮೆಲೇ ದೊಡ್ಡ ತಪ್ಪನ್ನ ಮಾಡಿದೆ ಎನಿಸುತ್ತದೆ. ಲೌಂಜ್‌ನ ಇನ್ನೊಂದು ಮೂಲೆಗೆ ಹೋಗಿ, ಅಲ್ಲಿ ಕೂಡುತ್ತೇನೆ. ಅವಳು ಒಂದು ಕುರ್ಚಿಬಿಟ್ಟು ಪಕ್ಕದ ಸಾಲಿನ ಕುರ್ಚಿಯಲ್ಲಿ ಕೂಡುತ್ತಾಳೆ.

'ನೀನು– ನಾನು ನಂಬೋದು ಬಿಡೋದು ಈಗ್ಯಾಕೆ ಬಂತು ಮಧು?'

'ಮತ್ತೆ ನಂಬಿಕೆಯಿದ್ದಿದ್ದರೆ, ನೀವು ಹಾಗೆ ಮಾತಾಡುತ್ತಿದ್ದಿರೆ?'

'ನಂಬಿಕೆ ಆವೊತ್ತು ಇವೊತ್ತಿನದಲ್ಲ, ಮಧು. ನಿನ್ನ ಸೆಮಿನಾರಿನ ಸಂದರ್ಭ ಜ್ಞಾಪಿಸ್ಕೊ.'

'ಸೆಮಿನಾರು, ಸೆಮಿನಾರು ಅಂದುಬಿಟ್ಟು, ಮತ್ತೆ ಮತ್ತೆ ನನ್ನನ್ನ ನಿಮ್ಮ ದಾಕ್ಷಿಣ್ಯದ ಕಂಬಕ್ಕೆ ಬಿಗಿದು ಒದೆತ ಕೊಡಬೇಡಿ, ದಯವಿಟ್ಟು.'

'ಇದ್ಯಾಕೆ ಮಧು? ಹೀಗೆ ಪ್ರತಿಯೊಂದನ್ನೂ ವಿಪರೀತವಾಗಿ ಅರ್ಥಮಾಡಿಕೊಳ್ತಿದೀಯ ಇವೊತ್ತು? ಸೆಮಿನಾರು ನಡೆದದ್ದು ಸುಳ್ಳೆ? ಪ್ರೊಫೆಸರು ಅದೇದಿನ ಗೈರುಹಾಜರಾದದ್ದು ಸುಳ್ಳೆ? ಡಾ. ವೀರಣ್ಣ ನಿನ್ನನ್ನ ಯಜ್ಞಪಶು ಮಾಡಿದ್ದು ಸುಳ್ಳೆ?...?'

'ಅದ್ಯಾವುದೂ ಸುಳ್ಳಲ್ಲ ಆನಂದ್. ನೀವು ನನಗೆ ಒತ್ತಾಸೆಯಾಗಿ ನಿಂತು, ನನಗೆ ಸಹಾಯ